ಸಿ.ಸಿ. ನಂಬರಃ 357/2015

ಪಿ.ಡಬ್ಲ್ಯೂಃ 6

ದಿಃ 17-11-2025 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಪಾಟಿ ಸವಾಲುಃ ಆರೋಪಿತರ ಪರ ವಕೀಲರಾದ ಶ್ರೀ ಎಸ್.ಆರ್.ಎನ್ ಇವರಿಂದಃ

ನೀವು ಆ ದಿನ ಚಾಸಾ-1 ರವರ ಜೊತೆಗೆ ನ್ಯಾಯಾಲಯದ ಒಳಗಡೆ ಬಂದಿರುವುದಿಲ್ಲ ಎಂದರೆ ಸಾಕ್ಷಿಯು ಹೊರಗಡೆ ಅವರ ವಾಹನದಲ್ಲಿ ಕುಳಿತುಕೊಂಡಿದ್ದೆ ಎಂದು ನುಡಿಯುತ್ತಾರೆ. ನ್ಯಾಯಾಲಯದ ಮುಂದೆ ರಸ್ತೆಯ ಮೇಲೆ ನಿಲ್ಲಿಸಿದ ವಾಹನದಲ್ಲಿ ಕುಳಿತುಕೊಂಡಿದ್ದೆ. ನೀವು ನ್ಯಾಯಾಲಯದ ಹೊರಗಡೆ ವಾಹನದಲ್ಲಿ ಕುಳಿಕೊಂಡರೆ ನ್ಯಾಯಾಲಯದ ಆವರಣದಲ್ಲಿ ಯಾರ ಮಧ್ಯ ಗಲಾಟೆಯಾಗಿರುತ್ತದೆ ಎಂದು ಕಾಣುವುದಿಲ್ಲ ಎಂದರೆ ಸರಿ. ನಿಮ್ಮ ಪ್ರಕಾರ ಕಾರಿನಲ್ಲಿ ಕುಳಿತುಕೊಂಡರೂ ಸಹ ನ್ಯಾಯಾಲಯದ ಒಳಗೆ ಹಾಗೂ ಹೊರಗಡೆ ಹೋಗಿ ಬರುವ ಜನರು ಕಾಣಿಸುತ್ತಿದ್ದರು ಎಂದರೆ ಸರಿ. ಪೊಲೀಸ್ ಠಾಣೆಯಲ್ಲಿ ಯಾವ ಸಮಯಕ್ಕೆ ದೂರನ್ನು ಕೊಡಲಾಯಿತು ಎಂದರೆ ಹೇಳಲು ಆಗುವುದಿಲ್ಲ ಎಂದು ನುಡಿಯುತ್ತಾರೆ. ನೀವೇನಾದರೂ ಪೊಲೀಸ್ ಠಾಣೆಯ ಒಳಗೆ ಹೋಗಿರುತ್ತೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಚಾಸಾ-1 ರವರು ಏನು ಬರೆದುಕೊಂಡಿರುತ್ತಾರೆ ಎಂದು ನಿಮಗೆ ಗೊತ್ತಿರುವುದಿಲ್ಲ ಎಂದರೆ ಸರಿ. ಆರೋಪಿಯ ವೈಯಕ್ತಿಕ ಪರಿಚಯ ನಿಮಗೆ ಇರುವುದಿಲ್ಲ ಎಂದರೆ ಸರಿ. ನೀವು

ಪ್ರತ್ಯಕ್ಷವಾಗಿ ಗಲಾಟೆ ಆಗಿರುವುದು ನೋಡಿರುವುದಿಲ್ಲ ಎಂದರೆ ಸರಿ. ಚಾಸಾ–1 ರವರ ಹೇಳಿಕೆಯ ಹೊರತಾಗಿ ನಿಮಗೆ ಈ ಪ್ರಕರಣದ ವೈಯಕ್ತಿಕ ಮಾಹಿತಿ ಇರುವುದಿಲ್ಲ ಎಂದರೆ ಸರಿ. ನೀವು ಕಾರಿನಲ್ಲಿ ಕುಳಿತಿರುವ ಸಂದರ್ಭದಲ್ಲಿ ಸಾಕಷ್ಟು ಜನರು ವಕೀಲರು ಹಾಗೂ ಪಕ್ಷಗಾರರು ನ್ಯಾಯಾಲಯದ ಒಳಗೆ ಹಾಗೂ ಹೊರಗೆ ಹೋಗಿ ಬರುವುದು ಮಾಡುತ್ತಿದ್ದರು ಎಂದರೆ ಸರಿ. ಯಾರು ಯಾರಿಗೆ ಬೈದರು, ಕೊಲೆ ಬೆದರಿಕೆ ಹಾಕಿದರು ಎಂದು ನಿಮಗೆ ವೈಯಕ್ತಿಕ ಮಾಹಿತಿ ಇಲ್ಲ ಎಂದರೆ ಸರಿ. ನೀವು ಚಾಸಾ–1 ರವರ ಮಿತ್ರರು ಆಗಿರುವುದರಿಂದ ನೀವು ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸಾಕ್ಷಿಯು ಅವರು ಸಹಿ ಮಾಡಲು ಹೇಳಿದ್ದರಿಂದ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ನೀವು ಪೊಲೀಸರಿಗಾಗಲಿ ಅಥವಾ ಬೇರೆಯವರಿಗಾಗಲಿ ಈ ರೀತಿ ಆಗಿರುತ್ತದೆ ಎಂದು ಹೇಳಿಕೆ ಕೊಟ್ಟಿರುವುದಿಲ್ಲ ಎಂದರೆ ಸರಿ.

<u>ಮರು ವಿಚಾರಣೆಃ ಇರುವುದಿಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

ಜೆ ಎಂ ಎಫ್ ಸಿ, ಅಂಕೋಲಾ.